# ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ಸೂರಜ್ ರೇವಣ್ಣ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)**

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 608**

**ಉತ್ತರಿಸಬೇಕಾದ ದಿನಾಂಕ : 20.02.2024**

**ಉತ್ತರಿಸಬೇಕಾದ ಸಚಿವರು : ಸಹಕಾರ ಸಚಿವರು**

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಹಕಾರ ಸಂಸ್ಥೆಗಳ ಸಂಖ್ಯೆ ಎಷ್ಟು; ಜಿಲ್ಲಾವಾರು ಅಂಕಿ ಅಂಶಗಳ ಮಾಹಿತಿ ನೀಡುವುದು; | ದಿನಾಂಕ: 31-03-2023 ರ ಅಂತ್ಯಕ್ಕೆ ಇದ್ದಂತೆ ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಕಾರ ಸಂಸ್ಥೆಗಳ ಸಂಖ್ಯೆ 46,279 ಇದ್ದು, ಜಿಲ್ಲಾವಾರು ಅಂಕಿ ಅಂಶಗಳ ಮಾಹಿತಿಯನ್ನು **ಅನುಬಂಧ** ದಲ್ಲಿ ನೀಡಲಾಗಿದೆ. |
| ಆ) | ಲಾಭಾಂಶದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮತ್ತು ನಷ್ಟದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಕಾರ ಸಂಸ್ಥೆಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಅಂಕಿ ಅಂಶಗಳ ಮಾಹಿತಿಯನ್ನು ನೀಡುವುದು) | ದಿನಾಂಕ: 31-03-2023 ರ ಅಂತ್ಯಕ್ಕೆ ಇದ್ದಂತೆ ರಾಜ್ಯದಲ್ಲಿ ಲಾಭಾಂಶದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಕಾರ ಸಂಸ್ಥೆಗಳ ಸಂಖ್ಯೆ 27,496 ಇದ್ದು, ನಷ್ಟದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಕಾರ ಸಂಸ್ಥೆಗಳ ಸಂಖ್ಯೆ 13,868 ಆಗಿರುತ್ತದೆ.<br><br>ಲಾಭ/ನಷ್ಟ ಇಲ್ಲದೇ ಇರುವ ಸಹಕಾರ ಸಂಘಗಳ ಸಂಖ್ಯೆ 4,915 ಇರುತ್ತವೆ.<br><br>ಇವುಗಳ ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ** ದಲ್ಲಿ ನೀಡಲಾಗಿದೆ. |
| ಇ) | ಪ್ರಸ್ತುತ ಆರ್ಥಿಕ ವರ್ಷದಲ್ಲಿ ರೈತ ಫಲಾನುಭವಿಗಳಿಗೆ ಸಾಲ-ಸೌಲಭ್ಯ ಪಡೆಯಲು ನಿಗದಿಪಡಿಸಿರುವ ಮಾನದಂಡವೇನು; ಹಾಗಿದ್ದಲ್ಲಿ ರೈತ ಫಲಾನುಭವಿಗಳಿಗೆ ದೊರೆಯುವ ಸಾಲ ಮತ್ತು ಇತರೆ ಸೌಲಭ್ಯಗಳು ಯಾವುವು; (ವಿವರ ನೀಡುವುದು) | ಪ್ರಸ್ತುತ ಆರ್ಥಿಕ ವರ್ಷದಲ್ಲಿ ರೈತ ಫಲಾನುಭವಿಗಳಿಗೆ ರೂ.5.00 ಲಕ್ಷದವರೆಗೆ ಅಲ್ಪಾವಧಿ ಸಾಲವನ್ನು ಹಾಗೂ ರೂ.15.00 ಲಕ್ಷದವರೆಗೆ ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲವನ್ನು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು, ಪಿಕಾರ್ಡ್ ಬ್ಯಾಂಕ್‌ಗಳು ಹಾಗೂ ಡಿಸಿಸಿ ಬ್ಯಾಂಕ್ ಗಳು ಸಾಲವನ್ನು ಮಂಜೂರು ಮಾಡುತ್ತಿರುತ್ತವೆ.<br><br>ಸಹಕಾರ ಸಂಸ್ಥೆಗಳು ಸಾಲ ವಿತರಿಸಲು ಅನುಸರಿಸುತ್ತಿರುವ ಮಾನದಂಡಗಳು ಈ ಕೆಳಗಿನಂತಿರುತ್ತವೆ.<br><br>ರೈತರಿಗೆ ಪತ್ತಿನ ಸಹಕಾರಿ ಸಂಸ್ಥೆಗಳ ಮೂಲಕ ರೂ.5.00 ಲಕ್ಷಗಳವರೆಗೆ ಶೂನ್ಯ ಬಡ್ಡಿ ದರದಲ್ಲಿ ಸಾಲ ನೀಡುವ ಅಲ್ಪಾವಧಿ ಬೆಳೆ ಸಾಲ ಯೋಜನೆ. |

| | | |
|---|---|---|
| | | 1) ರೈತನು ಸಂಘಕ್ಕೆ ಸಾಲ ಮತ್ತು ಸದಸ್ಯತ್ವಕ್ಕಾಗಿ ಅರ್ಜಿ ಸಲ್ಲಿಸತಕ್ಕದ್ದು.<br><br>2) ರೈತನ ಭೂಮಿ ಅಥವಾ ವಾಸಸ್ಥಳ ಸಂಘದ ವ್ಯಾಪ್ತಿಯಲ್ಲಿರತಕ್ಕದ್ದು,<br><br>3) ರೈತನು ಸಾಲ ಪಡೆಯಲು ನೀಡುವ ಭೂ ದಾಖಲೆಗಳಲ್ಲಿ ಇತರೆ ಯಾವುದೇ ಬ್ಯಾಂಕಿನಿಂದ ಸಾಲ ಪಡೆದಿರಬಾರದು.<br><br>4) ಬೆಳೆ ಸಾಲಕ್ಕಾಗಿ ರೈತನು ಹೊಂದಿರುವ ಭೂಹಿಡುವಳಿಗೆ ಮತ್ತು ಬೆಳೆಯುವ ಬೆಳೆಗೆ, ರಾಜ್ಯ ತಾಂತ್ರಿಕ ಸಲಹಾ ಸಮಿತಿ ಪ್ರತಿ ಬೆಳೆಗೆ ನಿಗದಿ ಪಡಿಸಿದ ಸ್ಕೇಲ್ ಆಫ್ ಫೈನಾನ್ಸ್ ಪ್ರಕಾರ ಬೆಳೆ ಸಾಲದ ಗರಿಷ್ಠ ಮಿತಿಯಾದ ಕ್ರಮಿಕ ಪತ್ತಿನ ಮಿತಿ (NCL)ಗೆ ಸಂಬಂಧಿಸಿದ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕುಗಳಿಂದ ಅನುಮೋದನೆ ಪಡೆದಿರತಕ್ಕದ್ದು.<br><br>5) ಮಧ್ಯಮಾವಧಿ ಹಾಗೂ ದೀರ್ಘಾವಧಿ ಕೃಷಿ ಸಾಲಕ್ಕಾಗಿ ಸಾಲದ ಭದ್ರತೆಗಾಗಿ ಒದಗಿಸುವ ದಾಖಲೆಗಳೊಂದಿಗೆ ಯೋಜನಾ ವರದಿಯನ್ನು ಸಲ್ಲಿಸತಕ್ಕದ್ದು.<br><br>6) ಇದರ ಆಧಾರದ ಮೇಲೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು ನಬಾರ್ಡ್ ನಿಂದ ದೊರೆಯುವ ಪುನರ್ಧನ ಮತ್ತು ತಮ್ಮ ಬಂಡವಾಳದ ಲಭ್ಯತೆ ಆಧರಿಸಿ ರೈತರಿಗೆ ಸಾಲ ಮಂಜೂರು ಮಾಡಲಾಗುತ್ತದೆ. |
| ಈ) | ಹಾಗಿದ್ದಲ್ಲಿ 2023-24ನೇ ಸಾಲಿನ ರಾಜ್ಯ ಬಜೆಟ್ ನಲ್ಲಿ ನಿಗದಿ ಪಡಿಸಿದ ಮೊತ್ತ ಸಹಕಾರ ಸಂಸ್ಥೆಗಳಿಗೆ ಪೂರೈಕೆಯಾಗಿದೆಯೇ ಹಾಗಿದ್ದಲ್ಲಿ ಎಷ್ಟು ಪ್ರಮಾಣದಲ್ಲಿ ಪೂರೈಕೆಯಾಗಿದೆ; ಇಲ್ಲದಿದ್ದಲ್ಲಿ , ಈ ಬಗ್ಗೆ ಸರ್ಕಾರ ತುರ್ತಾಗಿ ಕ್ರಮ ವಹಿಸುವುದೇ? (ವಿವರ ನೀಡುವುದು) | 2023-24ನೇ ಸಾಲಿನ ರಾಜ್ಯ ಬಜೆಟ್‌ನಲ್ಲಿ ಕೃಷಿ ಸಾಲಕ್ಕಾಗಿ ಬಡ್ಡಿ ಸಹಾಯಧನ ಯೋಜನೆಗೆ ರೂ.1,19,952.00 ಲಕ್ಷಗಳ ಆಯವ್ಯಯ ಅವಕಾಶವನ್ನು ಒದಗಿಸಲಾಗಿರುತ್ತದೆ. ಈ ಪೈಕಿ ಜನವರಿ 2024 ರ ಅವಧಿಗೆ ರೂ.98,960.00 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಿದ್ದು, (ಶೇ.82.49 ರಷ್ಟು) ಸಹಕಾರ ಸಂಸ್ಥೆಗಳಿಗೆ ಪೂರೈಕೆಯಾಗಿರುತ್ತದೆ. ಆರ್ಥಿಕ ಇಲಾಖೆಯು ಈಗಾಗಲೇ ಫೆಬ್ರುವರಿ ಹಾಗೂ ಮಾರ್ಚ್ 2024 ಅವಧಿಗೆ ಆರ್ಥಿಕ ಪ್ರತ್ಯಾಯೋಜನೆಯ ಆದೇಶವನ್ನು ಹೊರಡಿಸಿದ್ದು, ಉಳಿದ ಅನುದಾನ ಬಿಡುಗಡೆ ಮಾಡಲು ಕ್ರಮವಹಿಸಲಾಗುತ್ತಿದೆ. |

**ಸಂಖ್ಯೆ: ಸಿಒ 29 ಸಿಎಲ್ಎಸ್ 2024**

K. N. Rajanna

**(ಕೆ.ಎನ್.ರಾಜಣ್ಣ)**
ಸಹಕಾರ ಸಚಿವರು

ಅನುಬಂಧ-1

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಸೂರಜ್ ರೇವಣ್ಣ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 608ಕ್ಕೆ ಉತ್ತರ**

## ಅನುಬಂಧ-1

**ದಿನಾಂಕ:31-03-2023 ರ ಅಂತ್ಯಕ್ಕೆ ಇದ್ದಂತೆ ಕರ್ನಾಟಕ ರಾಜ್ಯದಲ್ಲಿರುವ ಸಹಕಾರ ಸಂಘಗಳ ಸಂಖ್ಯೆ (ಜಿಲ್ಲಾವಾರು)**

| ಕ್ರ.ಸಂ | ಜಿಲ್ಲೆಯ ಹೆಸರು | ಸಹಕಾರ ಸಂಘಗಳ ಸಂಖ್ಯೆ | | | | | | |
|---|---|---|---|---|---|---|---|---|
| | | ಕಾರ್ಯನಿರತ | ಸ್ಥಗಿತ | ಸಮಾಪನೆ | ಒಟ್ಟು | ಈ ಪೈಕಿ ಲಾಭದಲ್ಲಿರುವ ಸಹಕಾರ ಸಂಘಗಳು | ಈ ಪೈಕಿ ನಷ್ಟದಲ್ಲಿರುವ ಸಹಕಾರ ಸಂಘಗಳು | ಲಾಭ/ನಷ್ಟ ಇಲ್ಲದೇ ಇರುವ ಸಹಕಾರ ಸಂಘಗಳು |
| 1 | ಬೆಂಗಳೂರು 1ನೇ ವಲಯ | 699 | 46 | 61 | **806** | 467 | 214 | 125 |
| 2 | ಬೆಂಗಳೂರು 2ನೇ ವಲಯ | 487 | 13 | 57 | **557** | 231 | 305 | 21 |
| 3 | ಬೆಂಗಳೂರು 3ನೇ ವಲಯ | 658 | 12 | 43 | **713** | 458 | 203 | 52 |
| 4 | ಬೆಂಗಳೂರು 4ನೇ ವಲಯ | 697 | 0 | 70 | **767** | 423 | 274 | 70 |
| 5 | ಬೆಂಗಳೂರು ಗ್ರಾಮಾಂತರ | 1057 | 7 | 73 | **1137** | 1006 | 54 | 77 |
| 6 | ಕೋಲಾರ | 1430 | 0 | 233 | **1663** | 997 | 398 | 268 |
| 7 | ರಾಮನಗರ | 1231 | 54 | 76 | **1361** | 1073 | 103 | 185 |
| 8 | ಚಿಕ್ಕಬಳ್ಳಾಪುರ | 1299 | 90 | 194 | **1583** | 1070 | 405 | 108 |
| 9 | ತುಮಕೂರು | 2073 | 64 | 141 | **2278** | 1772 | 296 | 210 |
| 10 | ಚಿತ್ರದುರ್ಗ | 738 | 57 | 249 | **1044** | 354 | 671 | 19 |
| 11 | ದಾವಣಗೆರೆ | 1252 | 77 | 155 | **1484** | 667 | 758 | 59 |
| 12 | ಶಿವಮೊಗ್ಗ | 1245 | 0 | 68 | **1313** | 915 | 330 | 68 |
| 13 | ಮೈಸೂರು | 2339 | 155 | 97 | **2591** | 1445 | 709 | 437 |
| 14 | ಚಾಮರಾಜನಗರ | 727 | 54 | 44 | **825** | 562 | 162 | 101 |
| 15 | ಮಂಡ್ಯ | 2024 | 175 | 50 | **2249** | 1516 | 298 | 435 |
| 16 | ಹಾಸನ | 1950 | 39 | 72 | **2061** | 1495 | 114 | 452 |
| 17 | ಚಿಕ್ಕಮಗಳೂರು | 617 | 4 | 16 | **637** | 420 | 166 | 51 |
| 18 | ಕೊಡಗು | 306 | 14 | 24 | **344** | 206 | 132 | 6 |
| 19 | ದಕ್ಷಿಣ ಕನ್ನಡ | 831 | 27 | 27 | **885** | 726 | 133 | 26 |
| 20 | ಉಡುಪಿ | 687 | 1 | 12 | **700** | 605 | 59 | 36 |
| 21 | ಧಾರವಾಡ | 892 | 125 | 91 | **1108** | 540 | 532 | 36 |
| 22 | ಕಾರವಾರ | 883 | 9 | 69 | **961** | 708 | 235 | 18 |
| 23 | ವಿಜಯಪುರ | 1424 | 34 | 118 | **1576** | 1143 | 416 | 17 |
| 24 | ಬಾಗಲಕೋಟೆ | 1826 | 93 | 136 | **2055** | 1254 | 432 | 369 |
| 25 | ಬೆಳಗಾವಿ | 5354 | 638 | 268 | **6260** | 3690 | 2288 | 282 |
| 26 | ಗದಗ | 994 | 50 | 74 | **1118** | 433 | 566 | 119 |
| 27 | ಹಾವೇರಿ | 1248 | 40 | 62 | **1350** | 991 | 320 | 39 |
| 28 | ಬಳ್ಳಾರಿ | 1249 | 81 | 112 | **1442** | 732 | 600 | 110 |
| 29 | ಬೀದರ | 700 | 168 | 307 | **1175** | 106 | 328 | 741 |
| 30 | ಕಲಬುರಗಿ | 1168 | 53 | 241 | **1462** | 224 | 1187 | 51 |
| 31 | ಕೊಪ್ಪಳ | 639 | 68 | 83 | **790** | 496 | 116 | 178 |
| 32 | ರಾಯಚೂರು | 850 | 184 | 127 | **1161** | 629 | 506 | 26 |
| 33 | ಯಾದಗಿರಿ | 589 | 211 | 23 | **823** | 142 | 558 | 123 |
| ಒಟ್ಟು | | **40163** | **2643** | **3473** | **46279** | **27496** | **13868** | **4915** |

(ಸಹಿ)

ಸಹಕಾರ ಸಂಘಗಳ ನಿಬಂಧಕರು,
ಕರ್ನಾಟಕ ರಾಜ್ಯ, ಬೆಂಗಳೂರು